# ದಿನಾಂಕ: 08/12/2020 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-135 ಪಾದರಾಯನಪುರ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು:**

| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ |
|---|---|---|
| 1 | ಶ್ರೀ. ರವಿಕುಮಾರ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ |
| 2 | ಶ್ರೀ. ಎಂ.ಎಸ್. ಉಮೇಶ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ-140 |
| 3 | ಶ್ರೀ. ಜಯರಾಮ್ | ಸಹಾಯಕ ಅಭಿಯಂತರರು BESCOM |
| 4 | ಶ್ರೀ. ಸಂತೋಷ್ .ಎನ್ | ಸಹಾಯಕ ಅಭಿಯಂತರರು SWD West |
| 5 | ಶ್ರೀಮತಿ. ಸುಧಾ .ಎಸ್ | ಕಂದಾಯ ಪರಿವೀಕ್ಷಕರು. ವಾರ್ಡ್ ಸಂಖ್ಯೆ: 135 |
| 6 | ಶ್ರೀ. ಗೋವರ್ಧನ .ಕೆ | ಕಂದಾಯ ವಸೂಲಿಗಾರರು. ವಾರ್ಡ್ ಸಂಖ್ಯೆ: 135 |
| 7 | ಶ್ರೀ. ಸುನೀಲ್ ಕಡಪತಿ | ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಜೆಜೆಆರ್ ನಗರ |
| 8 | ಶ್ರೀ. ಬಸವಲಿಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ ಸಂಖ್ಯೆ: 135 |
| 9 | ಶ್ರೀ. ಪ್ರಕಾಶ | ಕೆಲಸ ಪರಿವೀಕ್ಷಕರು. ವಾರ್ಡ್ ಸಂಖ್ಯೆ: 135 |
| 10 | ಶ್ರೀ. ವೆಂಕಟೇಶ | ASI ಮಾಗಡಿ ರಸ್ತೆ |
| 11 | ಶ್ರೀ. ಸಯ್ಯದ್ | ಪಿಎಸ್ |
| 12 | ಶ್ರೀ. ಮಹದೇವ್. ಬಿ | ಸ್ಥಳೀಯ ನಾಗರೀಕರು |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು. ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.
2. <u>ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಚರ್ಚಿಸಿದ ವಿಷಯಗಳು:</u>

| ಕ್ರ.ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | BWSSB ವಿಭಾಗದ ವತಿಯಿಂದ ಅಧಿಕಾರಿಗಳಿಗೆ ಸಭೆ ನೋಟೀಸ್ ನೀಡಿದರು ಸಹಾ ಸಭೆಗೆ ಹಾಜರಾಗದಿರುವ ಬಗ್ಗೆ ಅಧ್ಯಕ್ಷರು ಗಮನಿಸಲಾಯಿತು. | ವಾರ್ಡ್ ಸಮಿತಿ ಸಭೆಯಲ್ಲಿ BWSSB ಹೆಚ್ಚಾಗಿ [illegible] ದೂರುಗಳು ಬರುತ್ತಿರುವುದರಿಂದ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಪತ್ರ ಮುಖೇನ ಸೂಚಿಸಲು ಸಭೆಯಲ್ಲಿ ನಿರ್ದೇಶಿಸಲಾಯಿತು. | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ-135 |
| 2 | ಪಾದರಾಯನಪುರ ಮುಖ್ಯರಸ್ತೆಯಲ್ಲಿ ಒಳಚರಂಡಿ ಕೊಳವೆ ಅಳವಡಿಸುವ ಕಾಮಗಾರಿ ಕೈಗೊಂಡಿರುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ BWSSB ವತಿಯಿಂದ ಒಳಚರಂಡಿ ಕೊಳವೆ ಅಳವಡಿಸುವ ಕಾಮಗಾರಿ ಸುಮಾರು 3 ತಿಂಗಳಿಂದ ಕೈಗೊಂಡಿದ್ದು ಇದುವರೆಗೂ ರಸ್ತೆಯು ಡಾಂಬರೀಕರಣ ಮಾಡದೆ ಇರುವ ಬಗ್ಗೆ ಈಗಾಗಲೆ ಪತ್ರ ಮುಖೇನ ತಿಳಿಸಿದರು ಕಾಮಗಾರಿ ಕೈಗೊಳ್ಳದೇ ಇರುವುದು ಕಂಡುಬಂದಿರುವುದರಿಂದ 2ನೇ Remainder ನೀಡಲು ಸಭೆಯಲ್ಲಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಜೆಆರ್ ನಗರ ಉಪವಿಭಾಗ, ಮತ್ತು ಸಹಾಯಕ ಅಭಿಯಂತರರು ವಾರ್ಡ್-135 |

...ಪ್ರ.ತಿ.ನೋ

Scanned by CamScanner

| | | | |
|---|---|---|---|
| 3 | ವಾರ್ಡಿನ ವ್ಯಾಪ್ತಿಯ ಬೀದಿ ದೀಪಗಳ ದೂರುಗಳನ್ನು ಸಮರ್ಪಕವಾಗಿ ನಿರ್ವಹಣೆ ಆಗದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ಬಗ್ಗೆ ಕಿರಿಯ ಅಭಿಯಂತರರು ವಿದ್ಯುತ್ ವಿಭಾಗ ರವರು ಸಭೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿದೀಪಗಳ ನಿರ್ವಹಣೆಗೆ Global Tender ಪ್ರಕ್ರಿಯೆ ಪ್ರಗತಿಯಲ್ಲಿದ್ದು ಈ ಕಾರ್ಯವು ವಿಳಂಬವಾಗುತ್ತಿರುವುದರಿಂದ ತಾತ್ಕಾಲಿಕವಾಗಿ ಬೀದಿದೀಪ ನಿರ್ವಹಣೆಗೆ ಪ್ರತ್ಯೇಕವಾಗಿ ಅನುಮೋದನೆ ಕೋರಿ ಕಡತವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು ಹಾಗೂ ಪ್ರಸ್ತುತ ಇರುವ ಬೀದಿದೀಪ ದೂರುಗಳನ್ನು 3 ದಿನಗಳ ಒಳಗಾಗಿ ಬಗೆಹರಿಸಲಾಗುವುದೆಂದು ತಿಳಿಸಲಾಯಿತು. | ಕಾರ್ಯಪಾಲಕ ಅಭಿಯಂತರರು/ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ (ಪಶ್ಚಿಮ) ಬಿಬಿಎಂಪಿ |
| 4 | 7ನೇ ಮುಖ್ಯರಸ್ತೆ Arfath Nagar ರಾಜಕಾಲುವೆ ಹೂಳು ತೆಗೆಯುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರ್ಗಾಲುವೆ ರವರು ಈ ಕೆಳಕಂಡ ಅಂಶಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.<br>1. ಪ್ರಸ್ತುತ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲಾಗುವುದು.<br>2. ರಾಜಕಾಲುವೆಯಲ್ಲಿ ಸ್ಥಳೀಯರು ಅನಧಿಕೃತವಾಗಿ ತ್ಯಾಜ್ಯ ಮತ್ತು ಜೈವಿಕ ತ್ಯಾಜ್ಯ ಸುರಿಯುತ್ತಿರುವುದನ್ನು ತಡೆಗಟ್ಟಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಸ್ಥಳೀಯ ಮುಖಂಡರುಗಳಿಗೆ ತಿಳಿಸಿದರು.<br>3. ಬೃಹತ್ ನೀರುಕಾಲುವೆಗೆ ಅಳವಡಿಸಿರುವ ತಂತಿಬೇಲಿಯನ್ನು ಕತ್ತರಿಸಿ ತ್ಯಾಜ್ಯ ಸುರಿಯುತ್ತಿರುವುದು ಕಂಡುಬಂದಿದ್ದು ಸದರಿ ತಂತಿಬೇಲಿ ಕಾಮಗಾರಿ ದುರಸ್ತಿ ಪಡಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.<br>4. ಬೃಹತ್ ನೀರುಕಾಲುವೆಯಲ್ಲಿ ಮಳೆನೀರು ಸರಾಗವಾಗಿ ಹರಿಯಲು ಕಾಲುವೆಯಲ್ಲಿ ಹಾದುಹೋಗಿರುವ ಒಳಚರಂಡಿ ಕೊಳವೆ Line ನ್ನು ಎತ್ತರಿಸಲು ಅಥವಾ ರಾಜಕಾಲುವೆ bedlevel ಇಂದ ಸುಮಾರು 3 ಅಡಿ ಕೆಳಗೆ ಇಳಿಸಲು ಸೂಚಿಸಬೇಕಾಗಿ ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಜೆಆರ್ ನಗರ ಉಪವಿಭಾಗ, ಸಹಾಯಕ ಅಭಿಯಂತರರು ವಾರ್ಡ್-135, ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೃಹತ್ ನೀರುಕಾಲುವೆ ಪಶ್ಚಿಮ ವಲಯ, ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB |
| 5 | ಪಾದರಾಯನಪುರ Road Widening ಸಂಬಂಧಿಸಿದಂತೆ | ಈ ಬಗ್ಗೆ ಕಂದಾಯ ಪರಿವೀಕ್ಷಕರು ಸಭೆಯಲ್ಲಿ ಪಾದರಾಯನಪುರ ಮುಖ್ಯರಸ್ತೆಯ Road Widening ವ್ಯಾಪ್ತಿಗೆ ಒಳಪಡುವ ಸ್ವತ್ತುಗಳ ಮಾಲೀಕರಿಗೆ ದಾಖಲೆಗಳನ್ನು ಸಲ್ಲಿಸುವಂತೆ ಪತ್ರ ನೀಡಿರುವುದಾಗಿ ಸಭೆಯಲ್ಲಿ ತಿಳಿಸಲಾಯಿತು. | ಸಹಾಯಕ ಕಂದಾಯ ಅಧಿಕಾರಿ, ಜೆಜೆಆರ್ ನಗರ ಉಪವಿಭಾಗ, ಮತ್ತು ಕಂದಾಯ ಪರಿವೀಕ್ಷಕರು ಪಶ್ಚಿಮ ವಲಯ |
| 6 | ಒಳಚರಂಡಿ ಕೊಳವೆ ಬದಲಿಸುವ ಬಗ್ಗೆ | 13ನೇ ಕ್ರಾಸ್ ಮತ್ತು 12ನೇ ಕ್ರಾಸ್ ಪಾದರಾಯನಪುರ ಒಳಚರಂಡಿ ಕೊಳವೆಯು Block ಆಗುತ್ತಿದ್ದು ಇದರಿಂದಾಗಿ ಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿರುವುದಾಗಿ ತಪ್ಪಿಸಲು ಒಳಚರಂಡಿ ಕೊಳವೆ ಬದಲಿಸುವಂತೆ BWSSB ಅಧಿಕಾರಿಗಳಿಗೆ ಸೂಚಿಸಲು ಸಾರ್ವಜನಿಕರು ಸಭೆಯಲ್ಲಿ ಮನವಿ ನೀಡಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB |

...ಪ್ರ.ತಿ.ನೋ

Scanned by CamScanner

| | | |
|---|---|---|
| 4ನೇ ಕ್ರಾಸ್‌ನಲ್ಲಿ RO Plant ಪ್ರಾರಂಭಿಸುವ ಬಗ್ಗೆ | ನೆಹರೂ ರಸ್ತೆ 4ನೇ ಕ್ರಾಸ್‌ನಲ್ಲಿ ನಿರ್ಮಾಣವಾಗುತ್ತಿರುವ RO Plant ನ್ನು ಪ್ರಾರಂಭಿಸಲು ಸಾರ್ವಜನಿಕರು ಸಭೆಯಲ್ಲಿ ಮನವಿ ನೀಡಿದರು. ಈ ಬಗ್ಗೆ ತುರ್ತಾಗಿ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಜೆಆರ್ ನಗರ ಉಪವಿಭಾಗ, ಮತ್ತು ಸಹಾಯಕ ಅಭಿಯಂತರರು ವಾರ್ಡ್-135 |
| ಹೊಸಹಳ್ಳಿ ಬ್ರಿಡ್ಜ್ ಮೇಲೆ ಅನಧಿಕೃತವಾಗಿ Debris ಸುರಿಯುತ್ತಿರುವ ಬಗ್ಗೆ | ಈ ಬಗ್ಗೆ ಈಗಾಗಲೆ ವಾರ್ಡ್-135 ರ ವ್ಯಾಪ್ತಿಯ ಬ್ರಿಡ್ಜ್ ಮೇಲೆ ಇರುವ Debrisನ್ನು ತೆರುವುಗೊಳಿಸಲಾಗಿದ್ದು, ಉಳಿದ ಭಾಗದಲ್ಲಿ ಇರುವ Debris ನ್ನು ಸಂಬಂಧ ವಿಭಾಗದವರಿಗೆ ತಿಳಿಸಿ ತೆರುವುಗೊಳಿಸುವಂತೆ ಪತ್ರ ಮುಖೇನ ತಿಳಿಸಲು ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಜೆಆರ್ ನಗರ ಉಪವಿಭಾಗ, ಮತ್ತು ಸಹಾಯಕ ಅಭಿಯಂತರರು ವಾರ್ಡ್-135 |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು
ನೋಡಲ್ ಅಧಿಕಾರಿ

ಪ್ರತಿಯನ್ನು:-

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 135 ಪಾದರಾಯನಪುರ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆಜೆಆರ್ ನಗರ ಉಪವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ಪಾದರಾಯನಪುರ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ಪಾದರಾಯನಪುರ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೃಹತ್ ನೀರುಗಾಲುವೆ (SWD) ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
13. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹ ಕಂದಾಯ ಅಧಿಕಾರಿ, ಚಾಮರಾಜಪೇಟೆ ಉಪವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಚಾಮರಾಜಪೇಟೆ/[illegible]/[illegible] ಪೊಲೀಸ್ ಠಾಣೆ, ಬೆಂಗಳೂರು ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16. ಆರಕ್ಷಕ ನಿರೀಕ್ಷಕರು, ಜೆ.ಜೆ.ಆರ್. ನಗರ/ಚಾಮರಾಜಪೇಟೆ ಸಂಚಾರ ವಿಭಾಗ, ಬೆಂಗಳೂರು ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
17. ವಾರ್ಡ್ ಸಂಖ್ಯೆ: 135 ಪಾದರಾಯನಪುರ ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner